6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ :– ಶ್ರೀನಿವಾಸ ಎಂಬುವರ ಕೊಲೆ ಕುರಿತು.

ಶ್ರೀ ಕೆ.ಆರ್. ರಮೇಶ್‌ಕುಮಾರ್ [ಶ್ರೀನಿವಾಸಪುರ] :– ಮಾನ್ಯ ಅಧ್ಯಕ್ಷರೆ, ಈ ವಿಚಾರ ಪ್ರಸ್ತಾಪ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕಛೇರಿಯಲ್ಲಿ ಪಡೆದಿದ್ದೆ. ಮೊನ್ನೆ ಶನಿವಾರ ರಾತ್ರಿ ಸುಮಾರು 12 ಗಂಟೆ ನಂತರ ನನ್ನ ಮತಕ್ಷೇತ್ರದಲ್ಲಿ ಶ್ರೀನಿವಾಸ ಎಂದು ಒಬ್ಬ ನಮ್ಮ ಸಹೋದ್ಯೋಗಿ, ನಮ್ಮ ಮಿತ್ರ ಆತನ ಕಗ್ಗೊಲೆಯಾಗಿದೆ. ನಾನು ಅನಾವಶ್ಯಕವಾಗಿ ಯಾವುದೇ ಬೇರೆ ವಿಷಯಗಳನ್ನು ಅದರಲ್ಲಿ ಬೆರಸದೆ, ಎಷ್ಟು ಅಗತ್ಯವಿದೆಯೋ ಅಷ್ಟನ್ನು ಮಾತ್ರ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಸುಮಾರು ಮೂರು ತಿಂಗಳ ಹಿಂದೆ ಮಲ್ಲಗಾನಪಲ್ಲಿ ಎಂಬ ಊರಿನಲ್ಲಿ ರಮೇಶ್ ಎಂಬ ಪರಿಶಿಷ್ಟ ಜಾತಿಗೆ ಸೇರಿದ ಯುವಕನನ್ನು, ಈ ರಾಜಕೀಯ ಅಭಿಪ್ರಾಯ ಭೇದಗಳು, ವೈಷಮ್ಯಗಳು ಇದ್ದದ್ದರಿಂದ, ಅವನ ವಿರೋಧಿಗಳಾಗಿದ್ದವರು ಅವನು ಹೊಲದಲ್ಲಿ ಕೆಲಸ ಮಾಡುತ್ತಿರುವ ವೇಳೆಗೆ, ಅವನ ತಂದೆ, ತಾಯಿ, ಅವನ ಹೆಂಡತಿ ಎಲ್ಲರೂ ಜೊತೆಗೆ ಇದ್ದಾಗಲೇ, ಹಾಡುಹಗಲೇ ಅವನನ್ನು ಕಗ್ಗೊಲೆ ಮಾಡಿದ್ದಾರೆ. ಅದಾದ ನಂತರ, ಸ್ಥಳದಲ್ಲೇ ಹಾಜರಿದ್ದಂತಹ ತಂದೆ, ತಾಯಿ, ಮೃತರ ಹೆಂಡತಿ, ಇಂಥಿಂಥವರು ಬಂದು ಈ ಕೃತ್ಯ ಎಸಗಿದರು ಎಂದು, ಅವರು ಆರೋಪ ಮಾಡಿದರೂ ಕೂಡ, ಸ್ಥಳೀಯ ಪೊಲೀಸ್ ಅಧಿಕಾರಿಗಳು, ಸ್ಥಳದಲ್ಲೇ ಇದ್ದಂತಹ ಹತ್ತಿರದ ರಕ್ತ ಸಂಬಂಧಿಗಳು ಹೇಳಿದಂತಹ ಆರೋಪಿಗಳ ಹೆಸರುಗಳನ್ನು FIR ನಲ್ಲಿ, Charge Sheet ನಲ್ಲಿ ಸೇರಿಸಿರಲಿಲ್ಲ. ಆತುರಾತುರವಾಗಿ ಒಂದು ತಿಂಗಳೊಳಗಾಗಿ ಯಾರೋ ಸಂಬಂಧ ಇಲ್ಲದವರನ್ನು ತಂದು, Charge Sheet file ಮಾಡಿದ್ದಾರೆ. ನಿಜವಾದ ಆರೋಪಿಗಳಿಗೆ ಇದರಿಂದ ಪರೋಕ್ಷವಾಗಿ ಉತ್ತೇಜನ ಸಿಕ್ಕಿದಂತಾಯಿತು. ಈಗೊಂದು 15 ದಿವಸಗಳ ಕೆಳಗೆ, ಆ ಹಳ್ಳಿಯಿಂದ 4 ಕಿ.ಮೀ ಬಾಜು, ಅತ್ತಿಕುಂಟೆ ಎಂಬ ಊರಿನಲ್ಲಿ ಮಂಜುನಾಥ್ ಎಂಬ ಮತ್ತೊಂಬ Scheduled Caste ಹುಡುಗನನ್ನು, ಅವನು ಸಂಜೆ ತನ್ನ ಮಕ್ಕಳನ್ನು ಕಾನ್ವೆಂಟ್‌ನಿಂದ ಕರೆದುಕೊಂಡು ಮನೆಗೆ ಬರುವ ವೇಳೆಗೆ, ದಾರಿಯಲ್ಲಿ ನಿಲ್ಲಿಸಿ ಅವನನ್ನು assault ಮಾಡಲಾಗಿದೆ. ಸುಮಾರು 13 ದಿವಸಗಳಿಂದ ಅವನು ಕೋಮಾದಲ್ಲಿದ್ದು, ಮೊನ್ನೆಯಿಂದ ಈಚೆಗೆ ಕಣ್ಣು ಬಿಡುತ್ತಿದ್ದಾನೆ. ಅವನು ಇನ್ನೂ out of danger ಎಂದು ಹೇಳುವಂತಹ ಸ್ಥಿತಿಯಲ್ಲಿ ನಾವಿಲ್ಲ. ಯಾವ ಆರೋಪಿಗಳು ಈ ಕೃತ್ಯವಾಗಿ ಎಸಗಿ, ರಮೇಶ್‌ನನ್ನು ಕೊಂದರೋ, ಅವರೇ ಈ ಕೃತ್ಯದಲ್ಲೂ ಪಾಲ್ಗೊಂಡಂತಹವರಾಗಿದ್ದಾರೆ. ಇವತ್ತಿಗೂ ಸಹ ಅವರ ಹೆಸರುಗಳನ್ನು ಹೇಳಿದ್ದರೂ ಸಹ, ಮಂಜುನಾಥ್ ಕೇಸ್‌ನಲ್ಲೂ ಸಹ ಅವರನ್ನು ದಸ್ತಿಗಿರಿ ಮಾಡಲಾಗಿಲ್ಲ. ಇದಕ್ಕೆಲ್ಲಾ ಕಾರಣವೇನೆಂದರೆ, ಈ ಶ್ರೀನಿವಾಸ್ ಎಂಬುವವನು. ಷೆಡ್ಯುಲ್ಡ್ ಟ್ರೈಬ್ಸ್‌ಗೆ ಸೇರಿದ

ಹುಡುಗ, ಈ ತಾಲ್ಲೂಕು ಪಂಚಾಯಿತಿ ಸಮಿತಿ ಚುನಾವಣೆಯಲ್ಲಿ, ಮುತುಕಪಲ್ಲಿ ಎನ್ನುವ ಕ್ಷೇತ್ರಕ್ಕೆ ಈ ಶ್ರೀನಿವಾಸ್ ಎಂಬುವವನು general constituency ನಿಂತಿದ್ದ. ಬಹಳ popular ಹುಡುಗ. ಒಬ್ಬ ಷೆಡ್ಯುಲ್ಡ್ ಟ್ರೈಬ್ ಹುಡುಗ general constituency ಗೆ ನಿಂತುಕೊಳ್ಳುವುದು, ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ ಎಂದು ತಾವೇ ಯೋಚನೆ ಮಾಡಿ, ಈ ಹುಡುಗರೆಲ್ಲಾ ಅವನ ಬೆಂಬಲಿಗರು. ನಮ್ಮ ಮೇಲೆ general constituency ಗೆ ಬಂದು ನಿಲ್ಲತಕ್ಕಂತಹ ಧೈರ್ಯನಾ ನಿಮಗೆ ಎನ್ನುವ ಒಂದು feudalistic attitude ಇವರದಿದೆ. ಮಂಜುನಾಥನನ್ನು assault ಮಾಡಿದ್ದಾಯಿತು, ರಮೇಶ್‌ನನ್ನು ಕೊಂದಿದ್ದಾಯಿತು, ಮತ್ತೆ ಮೊನ್ನೆ ಶ್ರೀನಿವಾಸನನ್ನು ಸಹ ಕೊಂದು ಬಿಟ್ಟಿದ್ದಾರೆ. ಪರಿಸ್ಥಿತಿ ಅಲ್ಲಿ ಹೇಗಿತ್ತು, ಇಡೀ ಮತಕ್ಷೇತ್ರದಲ್ಲಿರುವ SC/ST ಜನ ಅಲ್ಲಿ ಎಷ್ಟು ಸಂಖ್ಯೆಯಲ್ಲಿ ಜಮಾಯಿಸಿದ್ದರು, ಅಲ್ಲಿ ಯಾವ ರೀತಿಯ ವಾತಾವರಣವಿತ್ತು ಎಂಬುದಕ್ಕೆ ತಾವು ದಯಮಾಡಿ ತಮ್ಮ Deputy Commissioner ಮತ್ತು Superintendent of Police ಹತ್ತಿರ ವರ್ತಮಾನವನ್ನು ತೆಗೆದುಕೊಳ್ಳಿ. ನಾನು ಇದರಲ್ಲಿ ಏನೂ ಬೆರೆಸುವುದಕ್ಕೆ ಹೋಗುವುದಿಲ್ಲವೆಂದು ಮೊದಲೇ ತಮಗೆ ವಾಗ್ದಾನ ಮಾಡಿದ್ದೇನೆ. ನನ್ನ ಬೇಡಿಕೆ ಬಹಳ ಸರಳವಾದುದು. ರಮೇಶ್ ಮರ್ಡರ್ ಕೇಸ್‌ನಲ್ಲಿ ಅವರ ತಾಯಿ–ತಂದೆ, ಅವನನ್ನು ಹೆತ್ತಂತರಹವರು, ಬೆಳೆಸಿದಂತಹವರು, ಜೀವನ ನಡೆಸತಕ್ಕಂತಹ ಹೆಂಡತಿ, ಆತ ಕೊಲೆಯಾದಾಗ ಯಾರು ಸ್ಥಳದಲ್ಲೇ ಇದ್ದರೂ, ಅವರು ಹೇಳಿದಂತಹವರ ಹೆಸರುಗಳನ್ನು ಬಿಟ್ಟಿದ್ದಾರೆ. ಆದುದರಿಂದ, ದಯಮಾಡಿ ನಿಮ್ಮ ಇಲಾಖೆಗೆ ಸೂಚನೆಯನ್ನು ಕೊಟ್ಟು, ಈಗ Investigating Officer ಆಗಿ ಯಾವ ಅಧಿಕಾರಿ ಇದ್ದಾರೆ, ಅವರನ್ನು ಬದಲಾವಣೆ ಮಾಡಿ ನೀವು ಬೇರೆ Investigating Officer ಅನ್ನು ನೇಮಕ ಮಾಡಿ, ನೀವು ಯಾರಿಗಾದರೂ ಮಾಡಿ. ಅಡಿಷನಲ್ ಚಾರ್ಜ್‌ಶೀಟ್ ಫೈಲ್ ಮಾಡಿಸಿ. ನಿಜವಾದ ಆರೋಪಿಗಳು ಯಾರಿದ್ದಾರೆ, ಅವರು ಕೋರ್ಟಿನ ಕಟ್ಟಕಟ್ಟೆ ಹತ್ತಲಿ. ಅವರು ಕೊಲೆ ಮಾಡಿದರೊ ಇಲ್ಲವೋ ಎಂಬುದು ಕೋರ್ಟ್‌ನಲ್ಲಿ ಇತ್ಯರ್ಥವಾಗಲಿ. ರಮೇಶ್ ಕೇಸ್‌ನಲ್ಲಿದ್ದಂತಹವರೆ, ಮಂಜುನಾಥ್ ಕೇಸ್‌ಗೆ ಸಂಬಂಧಿಸಿದವರಾದ್ದರಿಂದ, ಮಾನ್ಯ ಗೃಹ ಮಂತ್ರಿಗಳೆ ನಿಮಗೆ ಹೇಳುತ್ತೇನೆ, ಅವರು ಇದುವರೆವಿಗೂ ಎಷ್ಟು ಅಸಹ್ಯವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆಂದರೆ, ಒಬ್ಬ ಅದರಲ್ಲಿ ಕಂಟ್ರಾಕ್ಟರ್. ಪಕ್ಕದಲ್ಲೆ ಇರುವ ಕೆರೆಯಲ್ಲಿ ಹೂಳೆತ್ತುವ ಕೆಲಸವನ್ನು ಮಾಡಿಸುತ್ತಿದ್ದಾನೆ. ಅವನು ಕಾರಿನಲ್ಲಿ ಹೋಗಿ ಕೆಲಸ ಸೂಪರ್‌ವೈಸ್ ಮಾಡಿಕೊಂಡು ಬರುತ್ತಾನೆ. ಪೊಲೀಸ್‌ನವರು, ಅವನು ನಮಗೆ ಸಿಕ್ಕುವುದಿಲ್ಲವೆಂದು ಜವಾಬ್ ಹೇಳುತ್ತಾರೆ. ಈ ಜನ ರೊಚ್ಚಿಗೇಳಬಾರದು, ಇವರ ಜೀವ ಹೋದರೂ ಕೂಡ ತಾಳ್ಮೆಯಿಂದ ಇರಬೇಕು, ಕೊಲೆ ಮಾಡಿಸಿದವನು ಕಾರಿನಲ್ಲಿ ತಿರುಗಿಕೊಂಡು

ರಾಜಾರೋಷವಾಗಿ ಓಡಾಡುತ್ತಿದ್ದರೂ ಕೂಡ, ಪೊಲೀಸ್‌ನವರು ಸುಮ್ಮನಿದ್ದರೆ, ನಾವು ಸುಮ್ಮನಿರಬೇಕು. ಅದರಲ್ಲಿ ಪಕ್ಷ ರಾಜಕಾರಣ ಮತ್ತೊಂದು ಬೆರೆಸುವುದು ನಮಗೆ ಬೇಡ. ದಯಮಾಡಿ ಅವರ್ಯಾರಿದ್ದಾರೆ, ಅವರನ್ನು ದಸ್ತಗಿರಿ ಮಾಡುವ ಕೆಲಸವಾಗಬೇಕು. ನಾನು ಶ್ರೀನಿವಾಸ್ ಕೇಸ್‌ನಲ್ಲಿ ಕೇಳತಕ್ಕಂತಹದ್ದು ಇಷ್ಟೆ. ಶ್ರೀನಿವಾಸ್ ಕೊಲೆ ಆದಾಗ ಅವನು ತನ್ನ ಮೋಟರ್ ಸೈಕಲ್‌ನಲ್ಲಿ ಹೋಗುತ್ತಿದ್ದರೂ ತಡೆದು ಕೊಂದಿದ್ದಾರೆ. ಅವನು ಸತ್ತಾಗ ಸ್ಥಳದಲ್ಲಿ ಅವನ ಹೆಂಡತಿಯ ತಮ್ಮ ಭಾವಮೈದುನ ಇದ್ದ, ಅವನಿಗೂ ಗಾಯಗಳಾಗಿವೆ. ಅವನಿನ್ನೂ ಜೀವಂತವಾಗಿ ಆಸ್ಪತ್ರೆಯಲ್ಲೇ ಇದ್ದಾನೆ. He is the eye-witness. He has survived. He was there on the spot when the incident took place. Kindly record the statement as per his version. Don't add or delete anything. Let there be no external influence or extraneous consideration. Just go by the facts as they are and initiate action. ಮೊನ್ನೆ ಜನ ಸ್ವಲ್ಪ ರೊಚ್ಚಿಗೆದ್ದಿದ್ದಾರೆ, ಯಾರು ಇದನ್ನು ಮಾಡಿಸಿದರೆಂದು ಅವರ ಮನೆಗಳಿಗೆ ಹೋಗಿ attack ಮಾಡಿದ್ದಾರೆ. ಅವರಿಗೂ ಸ್ವಲ್ಪ ತೊಂದರೆ ಎಲ್ಲಾ ಮಾಡಿದ್ದಾರೆ. ನನಗೆ ಅದು ಗೊತ್ತಾಗಿ, ನಾನು ಸ್ಥಳಕ್ಕೆ ಹೋಗಿ, ಇವರಿಗೆಲ್ಲಾ ಸಮಾಧಾನ ಹೇಳಿ, ಇವರನ್ನೆಲ್ಲಾ ಶಾಂತಗೊಳಿಸುವ ಹೊತ್ತಿಗೆ ಸ್ವಲ್ಪ ಸಮಯವಾಯಿತು. ಯಾರ ಕುಟುಂಬಗಳ ಮೇಲೆ ಇವರು ಉದ್ರೇಕಗೊಂಡು, ಇವರು ಉದ್ವೇಗದಲ್ಲಿ ತೊಂದರೆಯನ್ನು ಮಾಡಿದ್ದಾರೆ, ಅವರ ಕ್ಷಮೆಯನ್ನು ನಾನು ಕೋರುತ್ತೇನೆ. ಆ ರೀತಿ ಕಾನೂನನ್ನು ಕೈಗೆತ್ತಿಕೊಳ್ಳುವುದನ್ನು ನಾನು ಸಮ್ಮತಿಸುವುದಿಲ್ಲ. ಅವರಿಗೆ ಪರಿಹಾರವೇನಾದರೂ ಕೊಡುವುದಿದ್ದರೆ, ಸರ್ಕಾರದವರು ದಯಮಾಡಿ ಅದನ್ನೂ ಕೊಡಿ ಇವರು ಮಾಡಿರುವುದು ತಪ್ಪು. ಒಂದೆರೆಡು ಸಣ್ಣ ಅಂಗಡಿಗೆ ತೊಂದರೆ ಮಾಡಿದರು, ಅದಕ್ಕೆ ನಾನು ಹೇಳಿದೆ, ನಾನೇ ಬಂದು ಕುಳಿತುಕೊಂಡು, ಅವರಿಗೇನು ನಷ್ಟವಾಗಿದೆ ಅದನ್ನು ನಾನು ಕೊಡುತ್ತೇನೆಂದು ಹೇಳಿದೆ. Out of context ಎಂದು ತಾವು ತಿಳಿದುಕೊಳ್ಳದೇ ಹೋದರೆ ನಾನೊಂದು ಮಾತನ್ನು ಹೇಳುತ್ತೇನೆ. ಪೊಲೀಸ್ ಇಲಾಖೆಗೆ Political influence ಇರತಕ್ಕಂತಹದ್ದು ಹಾಗೆ ಹೀಗೆ ಮಾಡಿಸತಕ್ಕಂತಹದ್ದು, ಇದು ಅವತ್ತಿನಿಂದಲೂ ಇದೆ. ಹೊಸದಾಗಿ ಇವತ್ತು ಬಂದಿದೆ ಎಂದೇನು ಇಲ್ಲ. We have not allowed the department to function independently. ಅವರಿಗೆ autonomy ಇಲ್ಲ. ಒಂದು ಸೆಷನ್ಸ್ ಕೋರ್ಟ್‌ನಿಂದ ಒಂದು ಕ್ರೈಂ ನಲ್ಲಿ witness ಆಗಿರತಕ್ಕಂತಹವರನ್ನು, ನೀವು ಕೋರ್ಟ್ ಮುಂದೆ ಹಾಜರಾಗಿ ನೀವು ವಿಟ್ನೆಸ್ ಆಗಿದ್ದೀರೆಂದು ಹೇಳಿ ಸಮನ್ಸ್ ಕೊಡುತ್ತಾರೆ, they don't turn up. ಸಮನ್ಸ್‌ಗೆ ಅವರು ಟರ್ನ್ ಅಪ್ ಆಗದೇ ಇದ್ದಾಗ ವಾರೆಂಟ್ ಇಷ್ಯು ಮಾಡುತ್ತಾರೆ. ವಾರೆಂಟ್ ಆದಮೇಲೆ

non-bailable warrant ಕೊಡುತ್ತಾರೆ. Mr. Madhuswamy, I want to draw your attention. For witness in a crime, the Sessions Court resorts to the extent of issuing summons, warrant and non bailable warrant. Non-bailable warrant ಅನ್ನು first through Inspector, then through Superintendent of Police, ಆಮೇಲೆ IG Central Range ಮುಖಾಂತರ ಮೂರು ಸಲ ನಾನ್ ಸೆಷನ್ಸ್ ಕೋರ್ಟ್‌ನಿಂದ ಸರ್ವ್ ಮಾಡಿದರೆ, "Witness are not traceable" ಎಂದು ಹೇಳಿ, ಪೊಲೀಸ್‌ನವರು report to the Court, ಅಂದರೆ to drag on the proceedings. ಅಂದರೆ ಇವರು ಯಾವ extent ಗೆ ಬಂದಿದ್ದಾರೆ? If these police officers worth their salt are incapable of securing witnesses, are they really capable of rounding of the offenders, criminals? Hon. Law minister, please let me know. Is it ever possible? And where are we heading? ಈ ಪುರುಷಾರ್ಥಕ್ಕೆ ಅವರಿಗೆ ಈ ಯೂನಿಫಾರಂ ಏತಕ್ಕೆ ಬೇಕು? ಇವರೇನು ಬರಿ ವಸೂಲಿ ಮಾಡಿಕೊಂಡು ರೋಲ್ ಕಾಲ್ ಮಾಡಿಕೊಂಡು shameless life lead ಮಾಡುವುದಕ್ಕೆ ಮಾತ್ರ ಯೂನಿಫಾರಂ ಹಾಕಿಕೊಳ್ಳಬೇಕಾ? To talk about protection to Scheduled Castes and Scheduled Tribes has been the fashion of the day, I know. But, Sir, for me it is a matter of conviction. I stood by them at all costs. ಸತ್ತು ಹೋದ ಈ ಸಣ್ಣ ಹುಡುಗ ಯಾರಿದ್ದಾನೆ, ಇವನು ಮಿಡ್ಲ್ ಸ್ಕೂಲ್ ಓದುವ ವೇಳೆಗೆ ನನಗೆ ಪರಿಚಯವಾದವನು. ಅವನಿಗೆ ಓದಿಸಿ, ವಿದ್ಯಾಭ್ಯಾಸ ಕೊಡಿಸಿ, ಸ್ವತಂತ್ರವಾಗಿ ಬದುಕುವುದಕ್ಕೆ ವ್ಯವಸ್ಥೆ ಮಾಡಿಸಿ, ಅವನಿಗೆ ಲಗ್ನ ಮಾಡಿ, just 31 years old. ನಮ್ಮ ಪರಿಸ್ಥಿತಿ ಏನಾಗಿರುತ್ತದೆ ಯೋಚನೆ ಮಾಡಿಕೊಳ್ಳಿ. ಅವನಿಗೆ ಲಗ್ನ ಮಾಡಿ ಅವನಿಗೆ ಆಶೀರ್ವಾದ ಮಾಡಿ, ಅವನಿಗೆ ಎರಡು ಮಕ್ಕಳಿದ್ದಾರೆ, ನಾನು ಈ ದರಿದ್ರ ರಾಜಕಾರಣಕ್ಕೋಸ್ಕರ ಅವನನ್ನು ಗುಣಿಗೆ ಹಾಕಿಬರಬೇಕಾಗಯಿತು. ಏನು, ಹೋಗುತ್ತೆವೆಂದರೆ, ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಹೋಗಿ ಬಿಡುತ್ತೇವೆಯೆ ನಾವು? ನಾವು ನಾಗರೀಕತೆಯ ಸೋಂಕನ್ನು ಪರಿಪೂರ್ಣವಾಗಿ ಕಳೆದುಕೊಂಡುಬಿಟ್ಟಿದ್ದೇವೆ. ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರಲ್ಲಿ ನನಗೆ ಅತ್ಯಂತ ಹೆಚ್ಚಿನ ಗೌರವ ಮತ್ತು ವಿಶ್ವಾಸವಿದೆ. ಕೈ ಜೋಡಿಸಿ ನಿಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ, there are certain underserving elements who have, unfortunately, come to occupy certain sensitive positions in your hierarchy. They are bureaucrats, they have out-passed their limits. They have no sense of

shame nor integrity. They have been playing politics for the simple reason that they cannot defend themselves, I have decided not to name them on the floor of this House. It is they who are trying to make use of the Chief Minister's patronage, your patronage. ಇಲ್ಲಿಂದ ಮಾತನಾಡಿ, ನಾನು so and so ಎಂದು ಹೇಳುತ್ತಾರೆ. ಕೆಳಗಿನ ಅಧಿಕಾರಿಗಳಿಗೆ, ಬೆಂಗಳೂರಿನಲ್ಲಿ ಮೂರನೇ ಮಹಡಿಯಲ್ಲಿ ಕುಳಿತುಕೊಂಡು ವಿಧಾನ ಸೌಧದಲ್ಲಿ ಫೋನ್ ಮಾಡಿ, ಇದನ್ನು ಹೀಗೆ ಮಾಡಿ, ಅದನ್ನು ಹಾಗೆ ಮಾಡು ಎಂದರೆ sub-ordinate officer ಏನು ಮಾಡುತ್ತಾನೆ? ಅವನು ಇದನ್ನು ಸಾಲ್ವ್ ಮಾಡುವ ಹಾಗಿಲ್ಲ, ಡಿಫೈ ಮಾಡುವ ಹಾಗೂ ಇಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ವಾಟಾಳ್ ನಾಗರಾಜ್‌ರವರು ಅನೇಕ ಬಾರಿ ಹೇಳುತ್ತಿರುತ್ತಾರೆ. Sri.H.M. Channabasappa was the Home Minister of the State, Sri Siddaveerappa, was the Home Minister of the State. Sir, recent memory, ನಿಮ್ಮ ಕಲೀಗ್ ಆಗಿದ್ದವರು Late B. Rachaiah. ಕ್ರೆಡಿಟ್ ಯಾರ್ಯಾರೋ ತೆಗೆದುಕೊಂಡರು. But I say, ಬೆಂಗಳೂರಿನಲ್ಲಿ ರೌಡಿಸಂ ಮೆನೆಸ್ ಅನ್ನು ಕಂಟ್ರೋಲ್ ಮಾಡಿದವರು, ಪುಟ್ ಡೌನ್ ಮಾಡಿದವರು ಬಿ.ರಾಚಯ್ಯನವರು. This House must salute him today. He did not care for consequences. ಪಾರ್ಟಿ ಒಳಗೆ ಅವರು ವಿರುದ್ಧ ದೊಡ್ಡ ಸಂಚನ್ನೇ ಮಾಡಿಬಿಟ್ಟರು, ಅವರಿರಬಾರದೆಂದು ಅವರನ್ನು ಗೃಹ ಮಂತ್ರಿಗಳಿಂದ ತೆಗೆದರು. He never bothered, he never compromised. ಎಂ.ವಿ. ರಾಮರಾಯರು. Sir, Office comes and goes. It is matter of chance. You are a man above all these narrow considerations. You have established your credentials in public life. I appeal to you. Today I am the pained man.

(5–00 ಗಂಟೆ)

ನಾನು ಕೈಯಾರೆ ಬೆಳೆಸಿದ ಹುಡುಗ, ನಾನು ಸಾಕಿ ಸಂರಕ್ಷಣೆ ಮಾಡಿದವನಿಗೆ, ಯಾರ ಲಗ್ನಕ್ಕೆ ಹೋಗಿ ನಾನು ಅಕ್ಷತೆ ಕಾಳು ಹಾಕಿ ಬಂದಿದ್ದೆ, ಅವನ ಮೃತ ಶರೀರದ ಮೇಲೆ ನಾನು ಮಣ್ಣು ಹಾಕಿ ಬಂದಿದ್ದೇನೆ. It is as good as to put my own child into the grave. Please understand our feelings. I am not asking for anything. I am just asking for a fair and impartial enquiry. Let not anybody play mischief. I am praying for justice and justice and nothing else. Thank you.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದಲ್ಲಿ ಆದಂತಹ ಘಟನೆ ಅದರ ಬಗ್ಗೆ ಭಾವೋದ್ವೇಗಕ್ಕೆ ಕೂಡ ಒಳಗಾಗಿದ್ದಾರೆ. ಸತ್ತಂತಹವರು ಯಾರೇ ಇರಲಿ, ಅವರ ಜೊತೆ ಹೆಚ್ಚಿನ ಸಂಪರ್ಕ ಬಂದಾಗ ಹೆಚ್ಚು ದುಃಖಿತರಾಗತಕ್ಕಂಥದ್ದು ಸಹಜ ಸ್ವಭಾವ ಕೂಡ. ಆ ರೀತಿಯಾಗಿ ಕೊಲೆಯಾಗುವಂಥದ್ದು ಏನಿದೆ, ಅದು ಒಂದು ಬರ್ಬರ ಹತ್ಯೆ. ಅದು ನಾಗರೀಕ ಸಮಾಜದ ರಕ್ಷಣೆ ಕೂಡ ಅಲ್ಲ. ನಮ್ಮ ಭಿನ್ನಾಭಿಪ್ರಾಯಗಳು ಏನೇ ಇರಬಹುದು, ಕಾದಾಟಗಳು ಏನೇ ಇರಬಹುದು, ಅದರ ಮಧ್ಯೆ ಅನಾಗರೀಕವಾಗಿ ಒಬ್ಬರ ಪ್ರಾಣ ತೆಗೆಯತಕ್ಕಂತಹ ಸ್ಥಿತಿಗೆ ಸಾಮಾಜಿಕ ವ್ಯವಸ್ಥೆ ಬರಬಾರದು. ಆ ಕಾರಣಕ್ಕಾಗಿ ಅಲ್ಲಿ ನಡೆದಿರತಕ್ಕಂತಹ ಘಟನೆ, ಅದು ಒಂದು ವಿಷ ಘಳಿಗೆ. ಅದು ನಾವೆಲ್ಲರೂ ಖಂಡಿಸಬೇಕಾದಂತಹ ಒಂದು ಘಟನೆ ಎನ್ನುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ತಾವೇನು ಈಗ ಪ್ರಸ್ತಾಪ ಮಾಡಿದ್ದೀರಿ. ಅಧಿಕಾರಿಗಳು ಆ ತರಹ ವರ್ತಿಸುತ್ತಾರೆ, ಹಾಗೆ ಹೀಗೆ ಎನ್ನತಕ್ಕಂತಹ ಮಾತುಗಳನ್ನು ತಾವು ಹೇಳಿದ್ದೀರಿ. ಎಲ್ಲಾ ಕಾಲಗಳಲ್ಲಿಯೂ ಕೂಡ ಇಂತಹ ವಿಚಾರಗಳು ಇದ್ದೇ ಇರುತ್ತವೆ. ಒಮ್ಮೊಮ್ಮೆ ಉತ್ಪ್ರೇಕ್ಷೆಗೆ ಒಳಗಾಗಿರತಕ್ಕಂತಹ ವರದಿಗಳನ್ನು ತಮ್ಮ ಗಮನಕ್ಕೆ ತಂದಿರತಕ್ಕಂತಹ ಸಂಭವ ಇರುತ್ತದೆ. ಅದು ಏನೇ ಇರಲಿ, ನಾನು ಈ ಸರ್ಕಾರದ ಪರವಾಗಿ ಒಂದು ಮಾತನ್ನು ಖಂಡಿತವಾಗಿ ಈ ಒಂದು ಪವಿತ್ರವಾದ ಸದನದ ಮೂಲಕ ಹೇಳುತ್ತೇನೆ, ಯಾರೂ ಕೂಡ ಪಕ್ಷಪಾತ ರೀತಿಯಿಂದ ಯಾವುದೇ ಒಂದು ದುರುದ್ದೇಶದಿಂದ ವಿಚಾರಣೆ ನಡೆಸತಕ್ಕಂತಹ ಸಂದರ್ಭದಲ್ಲಿ ಯಾರನ್ನೋ ಮೆಚ್ಚಿಸಲಿಕ್ಕಾಗಲಿ, ಅಥವಾ ಯಾರನ್ನೋ ತೊಂದರೆಗೆ ಗುರಿ ಮಾಡಬೇಕೆನ್ನುವ ರೀತಿಯಲ್ಲಿ ನಡೆದುಕೊಳ್ಳದೆ, ಕಾನೂನಿಗೆ ಅನುಗುಣವಾದ ರೀತಿಯಲ್ಲಿ ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಬೇಕೆಂದು ಅವರಿಗೆ ಆದೇಶ, ಸೂಚನೆ ಮತ್ತು ಎಚ್ಚರಿಕೆ ಈ ಮೂರನ್ನೂ ಕೂಡ ಕೊಡಲಿಕ್ಕೆ ನಾನು ತಯಾರಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಹೊರಗಡೆ ಸಭೆಯಲ್ಲಿ ಕುಳಿತಾಗ ಇದೇ ಮಾತನ್ನು ಹೇಳಿದರು. ಯಾರನ್ನೂ ರಕ್ಷಿಸುವ ಉದ್ದೇಶ ಈ ಸರ್ಕಾರಕ್ಕೆ ಇಲ್ಲ. ಆ ಕಾರಣಕ್ಕಾಗಿ ಯಾರು ಸತ್ತಿದ್ದಾರೆ, ಅವರ ಕುಟುಂಬಕ್ಕೆ ಸಾಂತ್ವನ ಹೇಳುವುದಲ್ಲದೆ, ಅವರಿಗೆ ಆ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಕೊಡಲಿ ಎಂದು ಹೇಳುತ್ತಾ, ನಮ್ಮ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ಮಾಡಲಿಕ್ಕೆ ನಾವು ಆದೇಶ ಮಾಡುತ್ತೇವೆ. ಕಾನೂನಿಗನುಗುಣವಾಗಿ ವಿಚಾರಣೆ ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮೊದಲು ಸತ್ತಂತಹವನ ಕೇಸ್‌ನಲ್ಲಿ additional charge sheet ಹಾಕಬೇಕೆಂದು ನಾನು ತಮ್ಮಲ್ಲಿ ಮನವಿ ಸಲ್ಲಿಸಿದ್ದೆ. ಕಾರಣ ಸತ್ತಾಗ ಸ್ಥಳದಲ್ಲೇ ಅವನ ತಂದೆ ತಾಯಿ ಮತ್ತು ಹೆಂಡತಿ ಇದ್ದು ಅವರು ಇಂತಹವರು

ನಮ್ಮ ಮಗನನ್ನು ಕೊಂದರು ಎಂದು ಅವರ ಹೆಸರು ಹೇಳಿದರೆ, ಅವರ ಹೆಸರುಗಳನ್ನೇ ಬಿಟ್ಟಿದ್ದಾರೆ. ಈ ತರಹ ಲೋಪ ಮಾಡಿದ್ದಾರೆ. ಅದರಿಂದ ಉತ್ತೇಜಿತರಾಗಿ ಇದೆಲ್ಲಾ ಆಯಿತು, ಆದ್ದರಿಂದ ಆ ಕೇಸ್‌ನಲ್ಲಿ additional charge sheet ಹಾಕಬೇಕು. Please change the IO. You appoint an IO of your choice. I am not going to meddle with this. ದಯಮಾಡಿ, ಅವರ ತಂದೆ ತಾಯಿ ಮತ್ತು ಹೆಂಡತಿಯವರನ್ನು ಮತ್ತೊಮ್ಮೆ ವಿಚಾರಣೆ ಮಾಡಿ, ಪುನರ್‌ನೇಮಕವಾಗತಕ್ಕಂತಹ IO ಗೆ ಮನವರಿಕೆ ಆದರೆ, ಹೌದು ಸತ್ಯ ಇದು ತಪ್ಪಿ ಹೋಗಿದೆ, ಯಾವುದು court ಗಮನಕ್ಕೆ ಬರಬೇಕಾಗಿತ್ತು ಅದು ಬರಲಿಲ್ಲ ಎಂದರೆ, additional charge sheet ಹಾಕುವುದಕ್ಕೆ IO ನ change ಮಾಡಿ ಇದರಿಂದ ತಮಗೇನೂ ತೊಂದರೆ ಆಗತಕ್ಕಂಥದ್ದು ಇಲ್ಲ. ನಿಮ್ಮ ಈ ಒಂದು ಕೆಲಸದಿಂದ ಆ ಜನರಲ್ಲಿ ಆತ್ಮ ವಿಶ್ವಾಸ ಹೆಚ್ಚಾಗುತ್ತದೆ. ಸರ್ಕಾರದ ವ್ಯವಸ್ಥೆಯಲ್ಲಿ ಅವರಿಗೆ ಗೌರವ ಹೆಚ್ಚಾಗುತ್ತದೆ ಎಂದು ನಾನು ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

ಶ್ರೀ ಕೃಷ್ಣಪ್ಪಬೈರೇಗೌಡ (ವೇಮಗಲ್) :– ಮಾನ್ಯ ಅಧ್ಯಕ್ಷರೆ, ವಿಷಯದ ಗಂಭೀರತೆಯನ್ನು ಇಳಿಸುವುದು ಬೇಡವೆಂದು ನಾನು ಅವರು ಮಾತನಾಡಿದ ನಂತರ ತಾವು ಉತ್ತರ ಕೊಡಲಿ ಎಂದು ನಾನು ಸುಮ್ಮನೆ ಕುಳಿತಿದ್ದೆ. ನಾವು ಅಕ್ಕಪಕ್ಕದ ಜಿಲ್ಲೆಗಳಲ್ಲಿರತಕ್ಕಂತಹವರು. ಅಲ್ಲಿ ಏನಾಗುತ್ತದೆ, ನಮಗೂ ಸಹ ಅದೇ ಆಗುತ್ತದೆ. ನಮ್ಮಲ್ಲಿ ಆಗಿದ್ದು ಅವರಲ್ಲಿ ಆಗುತ್ತದೆ. ನಾವೆಲ್ಲರೂ ಸಹ ಹಂಚಿಕೊಂಡಿರತಕ್ಕಂತಹವರು. ಅವರು ಹೇಳಿದ ಹಾಗೆ ಪೊಲೀಸ್ ವ್ಯವಸ್ಥೆ ನಿಷ್ಪಕ್ಷಪಾತವಾಗಿ ಕೆಲಸ ಮಾಡದೆ ಇರತಕ್ಕಂತಹ ಹಿನ್ನೆಲೆಯಲ್ಲಿ ಯಾವುದೋ ಒಂದು ಒತ್ತಡಕ್ಕೆ ಮಣಿದು ಆ ಸಮಯಕ್ಕೆ ತಕ್ಕ ಹಾಗೆ ಯಾರು ಅವತ್ತಿನ ಸಮಯದಲ್ಲಿ ಅಧಿಕಾರದಲ್ಲಿರುತ್ತಾರೆ, ಅವರನ್ನು ಸಮಾಧಾನಗೊಳಿಸಲಿಕ್ಕೆ ತೆಗೆದುಕೊಳ್ಳತಕ್ಕಂತಹ ತೀರ್ಮಾನಗಳಿಂದ ಇವೆಲ್ಲಾ ಆಗುತ್ತಿವೆ ಎಂದು ಏನು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು, ಅದು ನೂರಕ್ಕೆ ನೂರರಷ್ಟು ಸತ್ಯ. ಯಾವುದಾದರೂ ಇಂತಹ ಘಟನೆಗಳು ನಡೆದಾಗ ನಿಷ್ಪಕ್ಷಪಾತವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಂಡರೆ, ನಾಳೆ ದಿನ ಯಾರೂ ಸಹ ಇಂತಹ ಕೃತ್ಯಕ್ಕೆ ಕೈ ಹಾಕುವುದಿಲ್ಲ. ಯಾವಾಗ ನಾವು ಪ್ರಭಾವ ಬೀರಿ ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳಬಹುದು ಎನ್ನತಕ್ಕಂತಹ ಅಭಿಪ್ರಾಯ ಜನರಿಗೆ ಬಂದಾಗ ನಾಳೆ ದಿನ ಅದರಿಂದ ಮತ್ತಷ್ಟು ಘಟನೆಗಳು ನಡೆಯಲಿಕ್ಕೆ ನಾವೇ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ನಮ್ಮದೂ ಅವರದೂ ಪಕ್ಕದ ತಾಲ್ಲೂಕುಗಳು. ನಮ್ಮ ತಾಲ್ಲೂಕಿನಲ್ಲಿ, ನಮ್ಮ ಕ್ಷೇತ್ರದಲ್ಲಿ ಹೇಳುವುದಾದರೆ, ಇತ್ತೀಚೆಗೆ ಕೋಲಾರ ತಾಲ್ಲೂಕಿಗೆ ಹೋಲಿಕೆ ಮಾಡಿದರೆ ನಮ್ಮ ತಾಲ್ಲೂಕಿನಲ್ಲಿ ಈ ತರಹ ಮರ್ಡರ್‌ಗಳು ತುಂಬ ಕಡಿಮೆ ಸಂಖ್ಯೆಯಲ್ಲಿ ಆಗುತ್ತಿದ್ದವು. ಆದರೆ ಇತ್ತೀಚೆಗೆ ಸುಮಾರು ಎರಡು ವರ್ಷಗಳಿಂದ

ನೋಡುತ್ತಿದ್ದೇವೆ, ದಿನೇ ದಿನೇ ಮರ್ಡರ್‌ಗಳ ಸಂಖ್ಯೆ ಹೆಚ್ಚುತ್ತಿದೆ. ಒಂದು ರಾಜಕೀಯ ದುರುದ್ದೇಶದಿಂದ ಪೂರಿತವಾದ ಹತ್ಯೆಗಳಾಗುತ್ತಿದ್ದರೆ, ಅದರ ಜೊತೆಗೆ ಈಚೆಗೆ ಏನಾಗಿದೆ ಎಂದು ಹೇಳಿದರೆ, ಭೂಮಿಗೆ ಸಾಕಷ್ಟು ಹೆಚ್ಚಿನ ಬೆಲೆ ಬಂದು, ಭೂಮಿ ದಲ್ಲಾಳಿಗಳು ಮತ್ತು ಮಾಫಿಯಾಗಳು ಇವರಿಂದ ಇನ್ನಷ್ಟು ಹತ್ಯೆಗಳು ಸಹ ಆಗುತ್ತಿವೆ. ಸಣ್ಣ ಸಣ್ಣ ಭೂಮಿ ವ್ಯಾಜ್ಯಗಳಿಗೆಲ್ಲಾ ಇವತ್ತು ಮರ್ಡರ್ ಮಾಡತಕ್ಕಂತಹ ಮಟ್ಟಕ್ಕೆ ಜನ ಹೋಗಿದ್ದಾರೆ. ಇದಕ್ಕೆಲ್ಲಾ ಕಾರಣ ಏನೆಂದು ಹೇಳಿದರೆ, ಪೊಲೀಸ್ ವ್ಯವಸ್ಥೆ ಬಗ್ಗೆ ಜನರಿಗೆ ಇವತ್ತು ನಂಬಿಕೆ ಇಲ್ಲ. ಪೊಲೀಸ್‌ನವರು ಏನು ಮಾಡುವುದಕ್ಕಾಗುತ್ತದೆ? ನಾನು ಹಣಾನೋ ಪ್ರಭಾವನೋ ಬೀರಿ ನಾನು ನನ್ನನ್ನು ಖುಲಾಸೆ ಮಾಡಿಸಿಕೊಳ್ಳಬಹುದು ಎನ್ನುವ ಧೈರ್ಯ ಇವತ್ತು ಬಂದಿದೆ. ನಾನು ಜಿಲ್ಲಾ ಪೊಲೀಸ್ ಅಧಿಕಾರಿಗಳಿಗೂ ಸಾಕಷ್ಟು ಬಾರಿ ಹೇಳಿದ್ದೇನೆ, ಮರ್ಡರ್ಸ್ ಆದಾಗ ನೀವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ. ನಾಳೆ ಜನರಿಗೆ ಅದೇ ಒಂದು ಸಂದೇಶವಾಗುತ್ತದೆ. ಇಂತಹ ಘಟನೆಗಳು ಮರುಕಳಿಸುವುದಿಲ್ಲವೆಂದು ಪದೇ ಪದೇ ಹೇಳಿದರೆ, ಏನು ಮಾಡಬೇಕೆನ್ನುವುದು ನಮಗೆ ಗೊತ್ತಿದೆ, ನೀವು ಹೇಳಬೇಕಾಗಿಲ್ಲ ಎಂದು ಹೇಳುತ್ತಾರೆ. ಇಂತಹ ಉತ್ತರ ಕೊಟ್ಟರೆ ಹೇಗೆ ಹೇಳಿ. ಉತ್ತರ ಏನು ಬೇಕಾದರೂ ಕೊಡಲಿ ಕಾರ್ಯರೂಪಕ್ಕೆ ತಂದು ತೋರಿಸಿದರೆ, ನಾವೂ ಒಪ್ಪಿಕೊಳ್ಳುತ್ತೇವೆ, ಅವರಿಗೆ ಗೌರವ ಕೊಡುತ್ತೇವೆ. ಕಳೆದ ಒಂದು ಒಂದೂವರೆ ವರ್ಷದಲ್ಲಿ ನನ್ನ ತಾಲ್ಲೂಕಿನಲ್ಲಿ ಆಗಿರತಕ್ಕಂತಹ ಮರ್ಡರ್ಸ್ ನನ್ನ ಮನಸ್ಸಿಗೆ ಬರತಕ್ಕಂಥದ್ದು ಹೇಳುತ್ತೇನೆ. ಶೆಟ್ಟಿಗಾನಹಳ್ಳಿ ಎನ್ನತಕ್ಕಂತಹ ಒಂದು ಊರಿನಲ್ಲಿ ಜಮೀನಿಗೆ ವ್ಯಾಜ್ಯ, ವಡಗೂರು ಎನ್ನತಕ್ಕಂತಹ ಒಂದು ಊರಿನಲ್ಲಿ ರಾಜಕೀಯ ವ್ಯಾಜ್ಯದಿಂದ ಮರ್ಡರ್ ಆಯಿತು. ಇತ್ತೀಚೆಗೆ ವೆಲಗಾಮುರಿ ಎನ್ನತಕ್ಕಂತಹ ಗ್ರಾಮದಲ್ಲಿ ಇಂದು ಮರ್ಡರ್ ಆಗಿದೆ. ಈಕಂಬಳ್ಳಿ ಎನ್ನತಕ್ಕಂತಹ ಗ್ರಾಮದಲ್ಲಿ ಜಮೀನಿನ ವ್ಯಾಜ್ಯದಿಂದ ಮರ್ಡರ್ ಆಗಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ನನ್ನ ಕ್ಷೇತ್ರದ ಕೇಂದ್ರ ಸ್ಥಾನವಾದ ವೇಮಗಲ್‌ನಲ್ಲಿ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಪೊಲೀಸ್ ಠಾಣೆ ಎದುರು ಬರ್ಬರವಾಗಿ ಮಚ್ಚಿನಿಂದ ಹತ್ಯೆ ಮಾಡಿದ್ದಾರೆ. ಸಣ್ಣ ಒಂದೂರವರೆ ಎಕರೆ ಜಾಗಕ್ಕೋಸ್ಕರ ಮರ್ಡರ್ ಆಗಿದೆ. ಕೆಲವೊಂದು ಕೇಸ್‌ಗಳಲ್ಲಿ ಪೊಲೀಸ್‌ನವರು ಯಾರು ಹತ್ಯೆ ಮಾಡಿರುತ್ತಾರೋ ಅವರ ಪರ ವಹಿಸಿ ಮಾತನಾಡುತ್ತಾರೆ. ಒಂದು ಘಟನೆಯಲ್ಲಿ ಊರಿನವರೆಲ್ಲರೂ ಮೂರು ಜನ ಸೇರಿ ಹತ್ಯೆ ಮಾಡಿದ್ದಾರೆಂದು ಹೇಳುತ್ತಾರೆ. ಸಂಬಂಧಪಟ್ಟ ಪೊಲೀಸ್ ಅಧಿಕಾರಿ ನಮ್ಮ ಹತ್ತಿರ ವಾದ ಮಾಡುತ್ತಾರೆ, ಇಲ್ಲಾ ಒಬ್ಬನೇ ಹತ್ಯೆ ಮಾಡಿರುವುದು ಎಂದು ವಾದ ಮಾಡುತ್ತಾನೆ. ಅಲ್ಲಿರತಕ್ಕಂತಹ circumstances ನೋಡಿದರೆ, ಸ್ಪಷ್ಟವಾಗಿ ಗೋಚರವಾಗುತ್ತದೆ, ಎರಡು ಮೂರು ಜನ ಸೇರಿ ಹತ್ಯೆ ಮಾಡಿದ್ದಾರೆಂದು ಊರಿನವರೆಲ್ಲಾ ಹೇಳುತ್ತಾರೆ, ಪೊಲೀಸ್ ಅಧಿಕಾರಿ ಇಲ್ಲ ಒಬ್ಬನೇ ಮಾಡಿರುವುದು ಎಂದು ವಾದ ಮಾಡುತ್ತಾನೆ.

ಇನ್ನು ಮರುಳಿನ ಬಗ್ಗೆ ಮಾತನಾಡುವಾಗ ಪೊಲೀಸ್‌ನವರು ಇವತ್ತು ಏನು ಮಾಡುತ್ತಾರೆಂದರೆ, ಎಲ್ಲಿ ಮರಳಿನಿಂದ ಹಣ ಬರುತ್ತದೆ, ಭೂ ಹಗರಣಗಳಲ್ಲಿ ಎಲ್ಲಿ ಹಣ ಬರುತ್ತದೆ ಅದರ ಕಡೆಗೆ ಅವರು ಗಮನ ಇದೆಯೇ ಹೊರತು, ಕಾನೂನು ಸುವ್ಯವಸ್ಥೆ ಕಾಪಾಡುವುದರ ಕಡೆ ಅವರು ಗಮನ ಕೊಡುತ್ತಿಲ್ಲ. ಇಂತಹ ಹಿನ್ನೆಲೆಯಲ್ಲಿ ಇವತ್ತು ಘಟನೆಗಳು ಜಾಸ್ತಿಯಾಗುತ್ತಿವೆ. ಇದು ಜನರಿಗೆ ಪ್ರಚೋದನಕಾರಿ ಆಗುತ್ತಿದೆ. ಬಹಳ ಸಲೀಸಾಗಿ ಸಣ್ಣ ಸಣ್ಣ ವ್ಯವಹಾರಗಳಿಗೆ, ವ್ಯಾಜ್ಯಗಳಿಗೆ, ರಾಜಕೀಯ ಭಿನ್ನಾಭಿಪ್ರಾಯಗಳಿಗೆ ಹತ್ಯೆ ಮಾಡುವ ಮಟ್ಟಕ್ಕೆ ಹೋಗತಕ್ಕಂತಹ ವ್ಯವಸ್ಥೆ ಇವತ್ತು ಜನ ಏನು ಕಾನೂನಿನಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆ, ಅದರಿಂದ ಈ ಘಟನೆಗಳು ನಡೆಯುತ್ತಿವೆ. It is a chain reaction. ಒಂದರ ಹಿಂದೆ ಒಂದು ಈ ತರಹ ಆಗುತ್ತಿವೆ. ಶ್ರೀನಿವಾಸಪುರದಲ್ಲಿ ಇವತ್ತು ಏನು ಮೂರು ಘಟನೆಗಳು ನಡೆದಿವೆ, ಮೂರು ಘಟನೆಗಳ ಬಗ್ಗೆ ತಾವು ಹಿಂದೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡಿದ್ದರೆ, ಬಹುಶಃ ಒಬ್ಬ ಯುವಕ ಇವತ್ತು ತನ್ನ ಪ್ರಾಣವನ್ನು ಕಳೆದುಕೊಳ್ಳತಕ್ಕಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಯಾವಾಗ ಪೊಲೀಸ್ ವ್ಯವಸ್ಥೆಯಲ್ಲಿ ಜನ ನಂಬಿಕೆಯನ್ನು ಕಳೆದುಕೊಂಡರೋ, ಜೊತೆಗೆ ಪೊಲೀಸ್ ವ್ಯವಸ್ಥೆ ಬಗ್ಗೆ ಗೌರವ ಕಳೆದುಕೊಂಡರೂ ಆಗ ನಾವು ಏನು ಮಾಡಿದರೂ ಸಹ ನಡೆಯುತ್ತದೆ ಎನ್ನತಕ್ಕಂತಹ ಒಂದು ಅಭಿಪ್ರಾಯದ ಹಿನ್ನೆಲೆಯಲ್ಲಿ ಇವತ್ತು ಈ ಘಟನೆಗಳೆಲ್ಲಾ ನಡೆಯುತ್ತಿವೆ. ಈಗಲಾದರೂ ಎಚ್ಚೆತ್ತುಕೊಂಡು ಆ ಜಿಲ್ಲಾ ಪೊಲೀಸ್ ವ್ಯವಸ್ಥೆ ಏನಿದೆ, ಅದನ್ನು ಆದಷ್ಟು ಬಿಗಿಗೊಳಿಸಿ, ಯಾರ್ಯಾರು ಉತ್ತಮವಾಗಿ ಕೆಲಸ ಮಾಡದೆ ಇರತಕ್ಕಂತಹ ಅಧಿಕಾರಿಗಳಿದ್ದಾರೆ, ನಿರ್ದಾಕ್ಷಿಣ್ಯವಾಗಿ ಅವರನ್ನು ತೆಗೆದು ಒಳ್ಳೆಯ ಕೆಲಸ ಮಾಡತಕ್ಕಂತಹವರಿಗೆ ಹಾಕಿ. ಇಲ್ಲವೆಂದರೆ ಇಂತಹ ಘಟನೆಗಳು ದಿನೇ ದಿನೇ ಜಾಸ್ತಿಯಾಗುತ್ತವೆ ಎಂದು ಹೇಳುತ್ತಾ ಮಾನ್ಯ ರಮೇಶ್ ಕುಮಾರ್‌ರವರು ಕೊಟ್ಟಿರುವ ಸಲಹೆಗಳನ್ನು ತಾವು ತೀವ್ರವಾಗಿ ಪರಿಗಣಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಡಾ॥ ಎಂ.ಸಿ. ಸುಧಾಕರ :– ಸುಮಾರು ಒಂದು ವಾರದ ಹಿಂದೆ ಚಿಂತಾಮಣಿ ನಗರದಲ್ಲಿ...

ಅಧ್ಯಕ್ಷರು :– ಕೋಲಾರದವರೆಲ್ಲರೂ ಮಾತನಾಡುತ್ತೀರಾ?

ಡಾ॥ ಎಂ.ಸಿ. ಸುಧಾಕರ :– ಕೋಲಾರ ಜಿಲ್ಲೆಯಲ್ಲಾಗುತ್ತಿರುವ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಅಲ್ಲಿ ಕೊಲೆಗಳಾಗುತ್ತಿವೆ. ಮೊನ್ನೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ತಾಜುದ್ದೀನ್ ಮತ್ತು ಸುನ್ನಾಸಾಬಿ ಇವರಿಬ್ಬರ ಮಧ್ಯೆ ಹಣದ ವಿಚಾರವಾಗಿ ಗೊಂದಲವಿತ್ತು. ಅವರನ್ನು Police Station ಗೆ ಕರೆದು ನ್ಯಾಯ ಪಂಚಾಯಿತಿ ಮಾಡಿದ್ದರು. ಮೊನ್ನೆ

ತಾಜುದ್ದೀನ್‌ರವರು ಸುನ್ನಾಸಾಬಿರವರ ಮನೆಗೆ ಹೋಗಿ ಹಣ ವಾಪಸ್ಸು ಕೊಡು ಎಂದು ಹೇಳಿದಾಗ ಅಲ್ಲಿ ಗಲಾಟೆ ಶುರುವಾದಾಗ ಅಲ್ಲಿರುವ ಜನ Police Station ಗೆ ಹೋಗಿ, ಈ ರೀತಿ ಗಲಾಟೆಯಾಗುತ್ತಿದೆ, ಬೇಗ ಬನ್ನಿ, ತೊಂದರೆಯಾಗುತ್ತದೆಂದು Circle Inspector ಗೆ ಹೇಳಿದರೆ, ಯಾರಾದರೂ ಸಾಯಲಿ ಬಿಡಿ, ಆಮೇಲೆ ಬರುತ್ತೇನೆನ್ನುವ ಮಾತನ್ನು ಅವರು ಹೇಳುತ್ತಾರೆ. ಈ ರೀತಿ ಬೇಜವಾಬ್ದಾರಿಯಾಗಿ ಒಬ್ಬ Circle Inspector ಗೆ ಹೇಳಿದರೆ, ಯಾವ ಮಟ್ಟಕ್ಕಾಗುತ್ತದೆ ನೋಡಿ. ತಾಜುದ್ದೀನ್ ಎನ್ನುವವರನ್ನು ಅರ್ಧ ಗಂಟೆಯಲ್ಲಿ ಕೊಲೆ ಮಾಡಿಬಿಟ್ಟರು. ಇವತ್ತು ಅದಕ್ಕೆ ಯಾರು ಹೊಣೆ? ಈ ರೀತಿಯಾಗಿ ಪೊಲೀಸ್ ಇಲಾಖೆಯವರು ಬಹಳ ಬೇಜವಾಬ್ದಾರಿಯಾಗಿ ಮಾತನಾಡುವುದಾದರೆ, ಈ ವ್ಯವಸ್ಥೆ ಯಾವ ರೀತಿಯಾಗಿ ಸರಿ ಹೋಗುತ್ತದೆ? ದಿನೇ ದಿನೇ ಈ ರೀತಿ ಒಬ್ಬೊಬ್ಬರನ್ನು ಕೊಲೆ ಮಾಡುತ್ತಾ ಹೋದರೆ, ವ್ಯವಸ್ಥೆಯಲ್ಲಿ ಜನರಿಗೆ ಯಾವುದೇ ರೀತಿಯಾದಂಥ ಭಯವಿಲ್ಲದಿದ್ದರೆ, ನಾವು ಯಾವ ರೀತಿಯಾಗಿ ರಕ್ಷಣೆ ಮಾಡುವುದು? ಈಗ ಮರಳಿನ ವಿಚಾರದಲ್ಲಿ ಕೃಷ್ಣ ಬೈರೇಗೌಡರು ಹೇಳಿದರು. ಮರಳು ದಂಧೆ ಮಾಡಿಕೊಂಡು, ಅದರಲ್ಲಿ ದುಡ್ಡು ಮಾಡುವುದೇ ವಿನಃ ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ಪೊಲೀಸ್ ಇಲಾಖೆ ಸಂಪೂರ್ಣವಾಗಿ ಕೋಲಾರ ಜಿಲ್ಲೆಯಲ್ಲಿ ವಿಫಲವಾಗಿದೆ. ದಯವಿಟ್ಟು, ತಾವು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ನಾನು ಇದರ ಬಗ್ಗೆ ಒಂದು ಪ್ರಶ್ನೆ ಕೇಳಿದ್ದೇನೆ. ಅದು ಬಂದ ನಂತರ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) :– ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಮಾನ್ಯ ರಮೇಶ್‌ಕುಮಾರ್‌ರವರು, additional charge sheet ಹಾಕತಕ್ಕಂಥದ್ದು ಮತ್ತು ಹೇಳಿಕೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರಗಳಲ್ಲಿ ಯಾರು ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತಾರೆ, ಅವರು ಕಾನೂನಿನಲ್ಲಿ ಇಂಥ ಪರ್ಯಾಯವಾದ ವ್ಯವಸ್ಥೆ ಮಾಡಲಿಕ್ಕೆ ಬೇಕಾದಷ್ಟು ಅವಕಾಶಗಳಿವೆ. ಅದನ್ನು ಅಲ್ಲಿಯ SHO ನಿರ್ಧಾರ ಮಾಡಬೇಕಾಗುತ್ತದೆ. ತಾವು I.O ಬದಲಿ ಮಾಡಬೇಕೆಂದು ಹೇಳಿದ್ದೀರಿ. ನಾನು ಮೇಲಾಧಿಕಾರಿಗಳ ಜೊತೆ ಮಾತನಾಡುತ್ತೇನೆ. ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕೆಂದಾಗ ಸಂಶಯಕ್ಕೊಳಪಡುವಂಥ ವ್ಯಕ್ತಿ ಅಲ್ಲಿರಬಾರದು. ಆ ಬಗ್ಗೆಯೂ ಕೂಡ ನಾನು ವರಿಷ್ಠ ಅಧಿಕಾರಿಗಳ ಜೊತೆ ಮಾತನಾಡಿ ನಿರ್ಣಯ ತೆಗೆದುಕೊಳ್ಳುತ್ತೇನೆ. ಪರ್ಯಾಯವಾಗಿರುವಂಥದ್ದರಲ್ಲಿ, ಅನೇಕ ಸಂದರ್ಭಗಳಲ್ಲಿ ಸೆಕ್ಷನ್ 174ರ ಕೆಳಗೆ ಮಾಡಿಕೊಂಡಿರುವುದು, ಸೆಕ್ಷನ್ 164ರ ಕೆಳಗೆ statement ತೆಗೆದುಕೊಳ್ಳುತ್ತೇವೆ. Additional Charge Sheet

ಹಾಕುವಂಥದ್ದು ಎಷ್ಟೋ ಸಂದರ್ಭಗಳಲ್ಲಿ ಬಂದಿದೆ. ಆ ತರಹದಲ್ಲಿ SHO ಅದರ ಬಗ್ಗೆ ನಿರ್ಣಯ ಮಾಡಿ, ಕ್ರಮ ಕೈಗೊಳ್ಳುತ್ತಾರೆ. ಮಾನ್ಯ ಕೃಷ್ಣ ಬೈರೇಗೌಡರು, ಸುಧಾಕರ್‌ರವರು ಹೇಳಿರುವುದೇನಿದೆ, ಇದೊಂದು ದುರ್ದೈವದ ಸಂಗತಿ. ಪ್ರಾಯಶಃ ಯಾವುದೇ ಭಾಗದಲ್ಲಿಯಾದರೂ ಕೂಡ ಈ ತರಹದ ಚಿಕ್ಕಪುಟ್ಟ ವ್ಯಾಜ್ಯಗಳ ಬಗ್ಗೆ ಮನುಷ್ಯ ತನ್ನ ಶಿಸ್ತನ್ನು, ಸಂಯಮವನ್ನು ಕಳೆದುಕೊಳ್ಳುವುದು ಇವತ್ತಿನ ಈ ಮಾರಾಟದ ರೀತಿಯೋ ಅಥವಾ ವ್ಯವಸ್ಥೆಯ ಪರಿಣಾಮವೋ, ಈ ಮಾರುಕಟ್ಟೆಯ ಸಂಸ್ಕೃತಿಯಿಂದ ಬಂದಿರುವಂಥ ಪ್ರಭಾವವೋ ಗೊತ್ತಾಗುತ್ತಿಲ್ಲ. ಹಿಂದೆ ಜನ ಇಷ್ಟರಮಟ್ಟಿಗೆ ಕೋಪೋದ್ರೇಕಕ್ಕೊಳಗಾಗುತ್ತಿರಲಿಲ್ಲ. ಆದರೆ, ಇವತ್ತು ಭೂಮಿಯ ಬೆಲೆ ಹೆಚ್ಚಾಗಿದೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ನಿಮಗೆ ಎಲ್ಲ ಕಾಲದಿಂದ ಗೊತ್ತಿದೆ. ಹೆಣ್ಣು ಮತ್ತು ಮಣ್ಣು ಇವುಗಳ ಕುರಿತಾಗಿ ನಾವು ಮೃಗೀಯ ಪ್ರವೃತ್ತಿಯನ್ನು ತೋರಿಸಿರುತ್ತೇವೆ. ಅದರ ಬಗ್ಗೆಯೂ ಕೂಡ ವ್ಯವಸ್ಥೆಯನ್ನು ನಾವು ಬದಲಿ ಮಾಡತಕ್ಕಂಥ ಅವಶ್ಯಕತೆ ಇದೆ ಮತ್ತು ಸಮಾಜದಲ್ಲಿ ಆಸೆಗಳಿಗೆ ಸ್ವಲ್ಪ ಮಿತಿಗಳನ್ನು ಹಾಕಿಕೊಳ್ಳತಕ್ಕಂಥದ್ದನ್ನು ಮಾಡಿಕೊಂಡರೆ ಅದು ಸಾಧ್ಯವಾಗುತ್ತದೆ. ಅದಕ್ಕೆ ಪೊಲೀಸ್‌ರಿಂದ ಏನೆಲ್ಲ ನೆರವು ಕೊಡಿಸಲಿಕ್ಕೆ ಸಾಧ್ಯವಿದೆ, ಅದನ್ನೆಲ್ಲ ಕೊಡಿಸುತ್ತೇನೆ. ಆದರೆ, ಇದೆಲ್ಲ ಹೇಳಿದಾಗಲೂ ಕೂಡ ನಮಗೇ ಹೇಳುವಾಗ ಒಳಗಡೆ ಸಂಶಯ ಬರುತ್ತದೆ. ಏಕೆಂದರೆ, ಪೊಲೀಸ್‌ನವರೂ ನಮ್ಮ ಅಣ್ಣ ತಮ್ಮಂದಿರೇ. ಅವರೇನೂ ಬೇರೆ ಕಡೆಯಿಂದ ಬಂದವರಲ್ಲ. ಈ ಸಮಾಜದ ಎಲ್ಲ ಓರೆ ಕೋರೆಗಳು, ದೌರ್ಬಲ್ಯಗಳು, ಸಾಹಸಗಳೂ ಕೂಡ ಅವರಲ್ಲಿರುತ್ತವೆ. ಆದ್ದರಿಂದ, ಅವರಲ್ಲಿಯೂ ಕೂಡ ಮೇಲಧಿಕಾರಿಗಳು ಪದೇ ಪದೇ ಇಂಥ ವಿಚಾರಗಳಲ್ಲಿ ಕಳುಹಿಸಿಕೊಡತಕ್ಕಂಥದ್ದು ಆಗಬೇಕು. ಮೊನ್ನೆ ಪದಕ ವಿತರಣೆ ಮಾಡುವ ಸಂದರ್ಭದಲ್ಲಿಯೂ, ಮುಖ್ಯಮಂತ್ರಿಗಳ ಪದಕವನ್ನು ಎದೆಯ ಮೇಲೆ ಹಾಕಿಕೊಂಡಾಗಲಾದರೂ ನಾನು ಇಂಥ ಪದಕಕ್ಕೆ ಭಾಜನನಾಗಿದ್ದೇನೆ, ಇನ್ನು ಮುಂದೆ ನನ್ನೆಲ್ಲ ದೌರ್ಬಲ್ಯಗಳನ್ನು ಬಿಟ್ಟು ಅದಕ್ಕನುಗುಣವಾದಂಥ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ನಿಮ್ಮ ಮನಸ್ಸಿಗೆ ಬಂದರೆ ದಾರಿ ತಪ್ಪುವುದು ಕಡಿಮೆಯಾಗಬಹುದು ಎಂದು ನಾನು ಹೇಳಿದ್ದೇನೆ. ಈ ಎಲ್ಲ ಸೂಚನೆಗಳನ್ನು ನಮ್ಮ ಇಲಾಖಾಧಿಕಾರಿಗಳಿಗೆ ಮುಟ್ಟಿಸಿ ಆದಷ್ಟು ಮಟ್ಟಿಗೆ ಸುವ್ಯವಸ್ಥೆ ಕಾಪಾಡುವಂಥ ಪ್ರಯತ್ನ ಮಾಡುತ್ತೇನೆ.